2016 ಕ.ತೀ.ವ. 648

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

## ಎಚ್.ಎಸ್. ಅನಂತ –ವಿರುದ್ಧ– ಎಂ.ಕೆ. ಮಂಜುನಾಥ ಮತ್ತು ಇನ್ನೊಬ್ಬರು*

**ಮೋಟಾರು ವಾಹನಗಳ ಅಧಿನಿಯಮ, 1988.**

**ಅಪಘಾತ ಕ್ಲೇಮುಗಳ ನ್ಯಾಯಾಧಿಕರಣವು ವಾಹನದ ಮಾಲೀಕನ ಮೇಲೆ ಹೊಣೆಯನ್ನು ಹೊರಿಸಿ ನೀಡಿದ ತೀರ್ಪು ಮತ್ತು ಐತೀರ್ಪನ್ನು ಈ ನಿಯತ ಮೊದಲ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.**

**ವಾಹನದ ಮಾಲೀಕ ಹಾಗೂ ಅಪಘಾತಕ್ಕೊಳಗಾದ ಕ್ಲೇಮುದಾರರು ಪರಸ್ಪರ ಶಾಮೀಲಾಗಿ ಹೊಣೆಯನ್ನು ವಿಮಾ ಕಂಪನಿಯ ಮೇಲೆ ಹೊರಿಸಲು ಸಂಚು ಮಾಡಿದ್ದಾರೆಂದು ಅಭಿಪ್ರಾಯಪಟ್ಟ ನ್ಯಾಯಾಲಯವು ವಾಹನ ಮಾಲೀಕನಿಂದ ಠೇವಣಿ ಮಾಡಲಾದ 25,000/– ರೂ.ಗಳನ್ನು ಸಹಾ ವ್ಯವಹರಣೆಗಳ ವೆಚ್ಚವೆಂದು ಮುಟ್ಟುಗೋಲು ಹಾಕಿಕೊಳ್ಳುವಂತೆ ನಿರ್ದೇಶಿಸಿ ಪ್ರಸ್ತುತ ಅರ್ಜಿಯನ್ನು ವಿಲೆ ಮಾಡಿದೆ.**

**(ಕಂಡಿಕೆಗಳು 7, 9)**

ಅರ್ಜಿದಾರರ ಪರ : ಶ್ರೀ ಹಾಲೇಶ್. ಆರ್.ಜಿ. ವಕೀಲರು.
2ನೇ ಪ್ರತ್ಯರ್ಜಿದಾರರ ಪರ : ಶ್ರೀ ಸಿ. ಶಂಕರ್‌ರೆಡ್ಡಿ, ವಕೀಲರು.
1ನೇ ಪ್ರತ್ಯರ್ಜಿದಾರರಿಗೆ ಜಾರಿಗೊಳಿಸಿದೆ ಹಾಗೂ ಪ್ರತಿನಿಧಿಸಿರುವುದಿಲ್ಲ.

*ಸಂಕೀರ್ಣ ಮೊದಲ ಮೇಲ್ಮನವಿ ಸಂಖ್ಯೆ: 10689/2012(ಎಂ.ವಿ.)
ದಿನಾಂಕ: 30ನೇ ಸೆಪ್ಟೆಂಬರ್ 2015.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ :**

ಎಂಎಸಿಟಿ, ಚನ್ನರಾಯಪಟ್ಟಣ ಇದರ ಕಡತದ ಮೇಲಿನ ಎಂವಿಸಿ ಸಂಖ್ಯೆ 328/2011ರಲ್ಲಿನ ಮೊದಲ ಪ್ರತ್ಯರ್ಜಿದಾರನು, 18.08.2012ರಂದಿನ ತೀರ್ಪಿಗೆ ಅನುಸಾರವಾಗಿ ಪರಿಹಾರವನ್ನು ಸಂದಾಯ ಮಾಡುವ ಕಡ್ಡಾಯ ಹೊಣೆಗಾರಿಕೆಗಳ ನ್ಯಾಯಾಧಿಕರಣದ ತೀರ್ಪನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಿರುತ್ತಾನೆ. ಈ ಅಪೀಲಿನಲ್ಲಿ ತೀರ್ಪನ್ನು ಪ್ರಶ್ನಿಸುವಾಗ, ಅಪೀಲುದಾರನು ಹೆಚ್ಚುವರಿ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾನೆ. ಅಪೀಲು ಮತ್ತು ಅರ್ಜಿಯನ್ನು ಪರಿಗಣನೆಗಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ.

2. ಈ ಅಪೀಲಿಗೆ ಕಾರಣವಾಗಿರುವ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿವೆ:

ಮೊದಲ ಪ್ರತ್ಯರ್ಜಿದಾರರಾದ ಎಂ.ಕೆ. ಮಂಜುನಾಥ ಬಿನ್ ಕೋಡಿ ಲಿಂಗಪ್ಪ ಇವರು ಆರಂಭಿಸಿದಂಥ ಎಂ.ವಿ.ಸಿ. ಸಂಖ್ಯೆ 328/2011ರಲ್ಲಿನ ನಡಾವಳಿಗಳಲ್ಲಿ 01.02.2010ರಂದು ಸುಮಾರು ರಾತ್ರಿ ಸುಮಾರು 8.45ರ ಸಮಯದಲ್ಲಿ ನ್ಯಾಯಾಲಯದ ಆವರಣದ ಮುಂದೆ ಬಿ.ಎಂ. ರಸ್ತೆಯ ಎಡ ಬದಿಯಲ್ಲಿ ನಡೆದುಹೋಗುತ್ತಿರುವಾಗ, ತನಗೆ ಹಿಂದುಗಡೆಯಿಂದ ಅಸಡ್ಡೆ ಹಾಗೂ ನಿರ್ಲಕ್ಷಿತ ರೀತಿಯಲ್ಲಿ ಕೆ.ಎ.3 ಎಲ್ 1721 ಸಂಖ್ಯೆಯನ್ನು ಹೊಂದಿದ್ದ ಮೋಟಾರು ಸೈಕಲನ್ನು ಚಾಲನೆ ಮಾಡಿಕೊಂಡು ಬಂದು ಹೊಡೆದಿರುತ್ತಾರೆಂದು ಕ್ಲೇಮು ಮಾಡಿರುತ್ತಾರೆ. ದಿನಾಂಕ 01.02.2010ರಂದು ರಾತ್ರಿ 8.45ರ ಸುಮಾರಿಗೆ ಅಪಘಾತ ಸಂಭವಿಸಿತೆಂದು ಹೇಳಲಾಗಿದ್ದಾಗ್ಯೂ, ಫಿರ್ಯಾದುದಾರರು ಸದರಿ ಅಪಘಾತದ ಉಲ್ಲೇಖದೊಂದಿಗೆ ದೂರನ್ನು 04.02.2010ರ ಸಂಜೆ 5.30ಕ್ಕೆ ಚನ್ನರಾಯಪಟ್ಟಣ ಪೊಲೀಸರ ಮುಂದೆ 04.02.2010ರಂದು

ಸಲ್ಲಿಸಿರುತ್ತಾರೆ. ಫಿರ್ಯಾದುದಾರನು ಸ್ವತಃ ಕ್ಲೇಮುದಾರನಾಗಿ ಅರ್ಜಿ ಸಲ್ಲಿಸಿರುತ್ತಾನೆ. ಕ್ಲೇಮುದಾರನನ್ನು ಆರಂಭದಲ್ಲಿ ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆ ತರುವಾಯ ಎಸ್.ಎಸ್.ಎಂ. ಆಸ್ಪತ್ರೆ, ಹಾಸನಕ್ಕೆ ಕರೆದೊಯ್ದು, ಒಂದು ಲಕ್ಷಕ್ಕಿಂತ ಹೆಚ್ಚಿನ ಹಣವನ್ನು ಚಿಕಿತ್ಸೆಗಾಗಿ ಖರ್ಚು ಮಾಡಲಾಗಿರುತ್ತದೆಂದು ಹೇಳಲಾಗಿರುತ್ತದೆ. ಈತನನ್ನು ಎರಡು ಆಸ್ಪತ್ರೆಗಳಲ್ಲಿ ದಾಖಲು ಮಾಡಲಾಗಿತ್ತೆಂದು ಹಾಗೂ ಎರಡೂ ಆಸ್ಪತ್ರೆಗಳಲ್ಲಿ ನೋಂದಾಯಿತ ಎಂ.ಎಲ್.ಸಿಯ ದಾಖಲೆಯ ಉಲ್ಲೇಖದೊಂದಿಗೆ ವಿವರಗಳನ್ನು ಹಾಜರುಪಡಿಸಿದಂಥ ಸದರಿ ಆಸ್ಪತ್ರೆಗಳಿಂದ ಹಲವಾರು ಬಿಲ್ಲುಗಳನ್ನು ನೀಡಲಾಗಿದೆಯೆಂದು ಹೇಳಿದ್ದಾಗ್ಯೂ ಅವುಗಳನ್ನು ಹಾಜರುಪಡಿಸಿರುವುದಿಲ್ಲ.

3. ಒಪ್ಪಿಕೊಂಡಂತೆ, ನ್ಯಾಯಾಧಿಕರಣದ ಮುಂದೆ, ಮೊದಲ ಪ್ರತ್ಯರ್ಜಿದಾರನು ರಸ್ತೆ ಅಪಘಾತದಲ್ಲಿ ತಾನು ಗಾಯಗೊಂಡಿರುವೆನೆಂದು ಕ್ಲೇಮು ಮಾಡಿರುತ್ತಾನೆ. ಅಪಘಾತ ಆದ ಕೂಡಲೇ ಮೋಟಾರು ಸೈಕಲಿನ ಸಂಖ್ಯೆಯನ್ನು ಕೂಡಲೇ ಗುರುತು ಮಾಡಿಕೊಂಡು, ಮೋಟಾರು ಸೈಕಲನ್ನು ಚಾಲನೆ ಮಾಡುತ್ತಿದ್ದಂಥ ವ್ಯಕ್ತಿಯನ್ನು ಗುರುತಿಸಿರುತ್ತೇನೆಂದೂ ವಾದಿಸಿರುತ್ತಾನೆ. ಹಾಗಿದ್ದಲ್ಲಿ, 01.02.2010ರಂದು ಆತ ದಾಖಲಾಗಿದ್ದ, ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆ ಮತ್ತು ಹಾಸನದ ಎಸ್.ಎಸ್.ಎಂ. ಆಸ್ಪತ್ರೆಗಳಲ್ಲಿನ ವೈದ್ಯರುಗಳಿಗೆ ಈ ವಿಷಯವನ್ನು ಆತ ಖಂಡಿತವಾಗಿಯೂ ಹೇಳಿರಲೇಬೇಕಾಗಿತ್ತು. ಕೆ.ಎ.13 ಎಲ್.1721 ಸಂಖ್ಯೆಯನ್ನು ಹೊಂದಿರುವ ಮೋಟಾರು ಸೈಕಲನ್ನು ಒಳಗೊಂಡ ಅಪಘಾತದಲ್ಲಿ ಕ್ಲೇಮುದಾರನು ಗಾಯಗೊಂಡಿರುತ್ತಾನೆಂದು ತೋರಿಸಲು ನ್ಯಾಯಾಲಯದ ಎದುರು ಸದರಿ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ. ಎಸ್.ಎಸ್.ಎಂ. ಆಸ್ಪತ್ರೆಯಿಂದ ನೀಡಿರುವಂಥ ಗಾಯದ ಪ್ರಮಾಣಪತ್ರವನ್ನು 19.02.2010 ರಂದು ನೀಡಲಾಗಿರುವಂಥ ನಿಶಾನೆ ಪಿ.4 ಎಂದು ನ್ಯಾಯಾಧಿಕರಣದ ಮುಂದಿನ ನಡಾವಳಿಗಳಲ್ಲಿ ಉದಾಹರಿಸಿರುತ್ತಾರೆ. ಸದರಿ ದಸ್ತಾವೇಜುಗಳು, ಮೇಲೆ ಹೇಳಿದ ವಾಹನವು ಅಪಘಾತದಲ್ಲಿ ಒಳಗೊಂಡಿರುವ ಬಗ್ಗೆ ಏನನ್ನೂ ಬಹಿರಂಗಪಡಿಸಿರುವುದಿಲ್ಲ.

4. ನಿಶಾನೆ ಪಿ.1 ರಿಂದ ಪಿ.9ರ ವರೆಗೆ ಉಲ್ಲೇಖಿಸಿದ ಪೊಲೀಸ್ ದಸ್ತಾವೇಜುಗಳಲ್ಲಿನ ನಡಾವಳಿಗಳನ್ನು ಅನುಸರಿಸಬೇಕೆಂದು ಕ್ಲೇಮುದಾರನು ಕೋರಿರುವುದನ್ನು ಮತ್ತು ಕ್ಲೇಮು ಮೋಸವುಳ್ಳದ್ದಾಗಿರುತ್ತದೆಂದು ಅದನ್ನು ನಿರಾಕರಿಸಿ ಮೊದಲ ಪ್ರತ್ಯರ್ಜಿದಾರನು ಪ್ರತಿವಾದ ಹೂಡಿರುವುದನ್ನು ಕಾಣಬಹುದಾಗಿರುತ್ತದೆ. ಪ್ರಥಮ ಮಾಹಿತಿ ವರದಿ ನಿಶಾನೆ.ಪಿ.2ಯನ್ನು ನೋಂದಾಯಿಸಿರುವುದನ್ನು ಆಧರಿಸಿ 04.02.2010ರಂದು ಸಲ್ಲಿಸಿದಂಥ ಫಿರ್ಯಾದಾದ ನಿಶಾನೆ ಪಿ.3 ಯನ್ನು ನಾವು ನೋಡಿದಲ್ಲಿ, ನಿಶಾನೆ ಪಿ.4 ಎಸ್.ಎಸ್.ಎಂ. ಆಸ್ಪತ್ರೆಯ ಗಾಯದ ಪ್ರಮಾಣಪತ್ರ, ನಿಶಾನೆ ಪಿ.5 ಆರೋಪಪಟ್ಟಿ, ನಿಶಾನೆ. ಪಿ.6 ಸ್ಥಳದ ಮಹಜರ್, ನಿಶಾನೆ.ಪಿ.7 ಪ್ರಸ್ತುತ ಅಪಘಾತದಲ್ಲಿ ಒಳಗೊಂಡ ವಾಹನವು ಅಪೀಲುದಾರನಿಗೆ ಸೇರಿದೆಯೆಂದು ತೋರಿಸುವ ಪ್ರಯತ್ನವಾಗಿರುವುದಕ್ಕಿಂತ ವಿಶಿಷ್ಟವಾಗಿರುವಂಥ ಅಭಿಗ್ರಹಣದ ಮಹಜರ್‌ಗಳಾಗಿರುತ್ತವೆ. ಅವು, ಅಪೀಲುದಾರ ಅಂದರೆ ಇಲ್ಲಿನ ವಾಹನದ ಮಾಲೀಕ, ಆ ಸಮಯದಲ್ಲಿ, ಪೊಲೀಸರಿಗೆ ಸದರಿ ಮೋಟಾರು ಸೈಕಲಿನ ಹೆಡ್‌ಲೈಟ್, ಇಂಡಿಕೇಟರ್ ಮತ್ತು ಮೀಟರ್ ಜೋಡಣೆ ಹಾಗೂ ಸ್ಟೇರಿಂಗ್ ಹ್ಯಾಂಡಲ್, ಅಲ್ಲದೆ ಅದರ ಟೂಲ್ ಬಾರ್‌ಗಳಿಗೆ ಹಾನಿಯಾಗಿದೆಯೆಂದು ಗುರುತಿಸಿದ್ದಂಥ ನಿಶಾನೆ.ಪಿ.7 ಸದರಿ ದಸ್ತಾವೇಜುಗಳಿಗೆ ಸಹಿ ಮಾಡಿರುವಂಥ ಪಂಚರ ಹಾಜರಿಯಲ್ಲಿ 03.03.2010ರಂದು ಪೊಲೀಸರ ಮುಂದೆ ವಾಹನವನ್ನು ಹಾಜರುಪಡಿಸಿದಂತೆ ಹೇಗೋ ಹಾಗೆ ತೋರಿಸುತ್ತವೆ. ಹೇಳಲಾದ ಈ ಹಾನಿಗಳನ್ನು 03.03.2010ರಂದು ಗಮನಿಸಲಾಗಿರುತ್ತದೆ. ಸದರಿ ವಾಹನವನ್ನು ಮೋಟಾರು ವಾಹನ ಇನ್ಸ್‌ಪೆಕ್ಟರ್‌ರವರಿಂದ ಪರಿಶೀಲನೆ ನಡೆಸಲು ಕಳುಹಿಸದಿರುವುದು ಆಶ್ಚರ್ಯಕರವಾದುದಾಗಿರುತ್ತದೆ.

5. ಅಮಾನತ್ ಮಹಜರನ್ನು, ಅಪೀಲುದಾರನಿಗೆ ಸಂಬಂಧಿಸಿದ ವಾಹನವು ಅಪಘಾತದಲ್ಲಿ ಒಳಗೊಂಡಿದೆ ಮತ್ತು ಮೇಲೆ ಹೇಳಿದ ಹಾನಿಗಳು ಸದರಿ ಅಪಘಾತದಲ್ಲಿ ವಾಹನಕ್ಕೆ ಉಂಟಾಗಿವೆಯೆಂದು ತೋರಿಸಲು ಉದಾಹರಿಸಲಾಗಿರುತ್ತದೆ. ಈ ದಸ್ತಾವೇಜುಗಳನ್ನು ಆಧರಿಸಿ, ಕ್ಲೇಮು ಅರ್ಜಿಯನ್ನು ಪರಿಶೀಲಿಸಲಾಗಿರುತ್ತದೆ. ಈ ಸಮಯದಲ್ಲಿ, ನ್ಯಾಯಾಧಿಕರಣದ ಮುಂದೆ ಪ್ರತ್ಯರ್ಜಿದಾರನಾಗಿದ್ದಂಥ ಅಪೀಲುದಾರನು ಮಂಡಿಸಿದಂಥ ಪ್ರತಿವಾದವನ್ನು ಗಮನಿಸಬೇಕಾದ ಅವಶ್ಯಕತೆ

ಇರುತ್ತದೆ. ಮೊದಲ ಪ್ರತ್ಯರ್ಜಿದಾರನು ಸಲ್ಲಿಸಿದ ಲಿಖಿತ ಹೇಳಿಕೆಯು, ಮೊಟ್ಟ ಮೊದಲನೆಯದಾಗಿ ಸದರಿ ವಾಹನದಲ್ಲಿ ಅಪಘಾತ ಆಗದಂತೆ ಆತ ಅದನ್ನು ತಪ್ಪಿಸಿದನೆಂಬುದನ್ನು ಸೂಚಿಸುತ್ತದೆ ಹಾಗೂ ಇದೇ ಸಂದರ್ಭದಲ್ಲಿ ಕ್ಲೇಮುದಾರನು ಮೊದಲ ಪ್ರತ್ಯರ್ಜಿದಾರನಿಗೆ ಸಂಬಂಧಿಸಿದ ವಾಹನದಿಂದಲೇ ಅಪಘಾತಕ್ಕೆ ಒಳಗಾಗಿ ಗಾಯಗೊಂಡಿರುತ್ತೇನೆಂದು ವಿವರಿಸಿರುತ್ತಾನೆ. ಇದಕ್ಕೆ ನ್ಯಾಯಾಧಿಕರಣದ ಎದುರು ಮೊದಲ ಪ್ರತ್ಯರ್ಜಿದಾರನಾಗಿದ್ದಂಥ ಇಲ್ಲಿನ ಅಪೀಲುದಾರನಿಗೆ ಸಂಬಂಧಿಸಿದ ಮೋಟಾರು ಸೈಕಲಿನ ವಿಮಾದಾರನು ನ್ಯಾಯಾಧಿಕರಣದ ಎದುರು ಪ್ರತ್ಯರ್ಜಿದಾರ ಸಂಖ್ಯೆ 2ರ ಮೂಲಕ ಉತ್ತರಿಸಬೇಕಾಗಿರುತ್ತದೆ. ಇದರಿಂದಾಗಿ ಈ ನಡಾವಳಿಗಳಲ್ಲಿ ಅಂತೆಯೇ ನ್ಯಾಯಾಧಿಕರಣದ ಎದುರು ಎರಡನೇ ಪ್ರತ್ಯರ್ಜಿದಾರನಾಗಿರುವಂಥ ವಿಮಾದಾರರಿಂದ ಸಲ್ಲಿಸಿರುವ ಹೇಳಿಕೆಯಲ್ಲಿ, ದಿನಾಂಕ 04.02.2010ರಂದು ತಡಮಾಡಿ ದೂರನ್ನು ನೀಡಿರುವುದರಿಂದ ಹಾಗೂ ಆ ತರುವಾಯ, 03.03.2010ರಿಂದ, ಕ್ಲೇಮುದಾರ 2,09,100/–ರೂ.ಗಳ ಮೊಬಲಗಿನ ಪರಿಹಾರವನ್ನು ಪಡೆಯುವಲ್ಲಿ ನ್ಯಾಯಾಧಿಕರಣದ ಎದುರು ಕ್ಲೇಮು ಅರ್ಜಿಯನ್ನು ಪರಿಶೀಲಿಸಿರುವ ದಿನಾಂಕದವರೆಗೂ ವಾಹನವನ್ನು ಅಭಿಗ್ರಹಿಸಿದ್ದರೆ ಹೇಗೋ ಹಾಗೆ ಅದನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರಿಂದ ಇಡೀ ಕ್ಲೇಮು ಅರ್ಜಿಯು ಮೋಸದಿಂದ ಕೂಡಿದೆಯೆಂದು ನಿರೂಪಿಸಿರುತ್ತಾನೆ.

6. ನ್ಯಾಯಾಧಿಕರಣದ ಮುಂದಿರುವ ನಡಾವಳಿಗಳಲ್ಲಿ, ಇಲ್ಲಿನ ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕ ಮತ್ತು ಇಲ್ಲಿನ ಅಪೀಲುದಾರ ಹೇಳಿಕೆಯನ್ನು ಸಲ್ಲಿಸಿದಾಗ್ಯೂ, ಆತನ ವಾಹನವನ್ನು ಅಪರಾಧದಲ್ಲಿ ಗುರಿಮಾಡುವ ಪ್ರಯತ್ನ ನಡೆದಾಗ ಅಪಘಾತದಲ್ಲಿ ಆತನ ವಾಹನ ಒಳಗೊಂಡಿರುವುದಿಲ್ಲವೆಂದು ನಿರೂಪಿಸಲು ಗಂಭೀರ ಪ್ರತಿವಾದವನ್ನು ಮಾಡಬೇಕಾದ ನಡಾವಳಿಗಳಲ್ಲಿ, ಆತ ಸಕ್ರಿಯವಾಗಿ ಭಾಗವಹಿಸಿಲ್ಲವೆಂಬುದು ಮತ್ತು ಸಾಕ್ಷ್ಯದ ಭಾಗಕ್ಕೆ ಬಂದಾಗ ತನ್ನ ವಾಹನ ಅಪಘಾತಕ್ಕೆ ಕಾರಣವಾಗಿದೆಯೆಂದು ಹೇಳಿ, ಅಪೀಲುದಾರನ ವಾಹನವು ಕ್ಲೇಮುದಾರನಿಗೆ ಗಾಯಗಳನ್ನು ಉಂಟು ಮಾಡಿವೆಯೆಂಬ ಆತನ ಹೇಳಿಕೆಯ ಉಲ್ಲೇಖದೊಂದಿಗೆ ಆತನನ್ನು ಪಾಟೀ ಸವಾಲು ಮಾಡಲು ಆಯ್ಕೆ ಮಾಡಿಕೊಂಡಿಲ್ಲದಿರುವುದನ್ನು ಕಾಣಬಹುದಾಗಿರುತ್ತದೆ. ವಿಷಯುವನ್ನು ನ್ಯಾಯಾಧಿಕರಣದ ಮುಂದೆ ತಂದಾಗ ಕೂಡ ಆತ ಸ್ವತಂತ್ರ ಸಾಕ್ಷ್ಯವನ್ನು

ಮುಂದುವರೆಸಿರುವುದಿಲ್ಲ. ಆತ ಕ್ಲೇಮು, ಎರಡನೇ ಪ್ರತ್ಯರ್ಜಿದಾರನ ವಿರುದ್ಧ ಸಂಶಯಾಸ್ಪದವಾಗಿದ್ದು, ಪೂರ್ವ ಪಕ್ಷದ ಮೇಲೆ ನ್ಯಾಯಾಧಿಕರಣದ ಮೂಲಕ ವಿಮಾದಾರನ ಹೊಣೆಗಾರಿಕೆಯನ್ನು ವಿಮುಕ್ತಗೊಳಿಸಿ ಕ್ಲೇಮು ಅರ್ಜಿಯನ್ನು ವಿಲೆ ಮಾಡುವವರೆಗೂ ನಡಾವಳಿಗಳಿಂದ ಅನುಕೂಲಕರವಾಗಿಯೇ ದೂರ ಉಳಿದಿದ್ದನು. ಆ ತರುವಾಯವೇ ಮೊದಲ ಪ್ರತ್ಯರ್ಜಿದಾರ ಮಾಲೀಕನು ಈ ಅಪೀಲಿನಲ್ಲಿ ನ್ಯಾಯಾಧಿಕರಣದ ಎದುರು ಹಾಜರಾಗಿರುತ್ತಾನೆ.

7. ಎಂಎಸಿಟಿ, ಚನ್ನರಾಯಪಟ್ಟಣದ ಎದುರು ತುಂಬಾ ಗಂಭೀರತೆಯಿಂದ ಎಂವಿಸಿ ಸಂಖ್ಯೆ 328/2011ರಲ್ಲಿ ಕ್ಲೇಮು ಅರ್ಜಿಯನ್ನು ಅನುಸರಿಸಿದ ಕ್ಲೇಮುದಾರನು ಈ ನಡಾವಳಿಗಳಲ್ಲಿನ ನೋಟೀಸನ್ನು ನೀಡಿದಾಗ, ನ್ಯಾಯಾಲಯದಿಂದ ಅನುಕೂಲಕರವಾಗಿ ದೂರವೇ ಉಳಿದಿದ್ದನು. ನ್ಯಾಯಾಧಿಕರಣದ ಮುಂದೆ ಮೊದಲ ಪ್ರತ್ಯರ್ಜಿದಾರನಾಗಿರುವ ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನು ವಿಮಾ ಕಂಪನಿಯ ಮೇಲೆ ಪರಿಹಾರವನ್ನು ಸಂದಾಯ ಮಾಡುವ ಬದ್ಧತೆಯನ್ನು ವರ್ಗಾಯಿಸುವಂತೆ ಅಪೀಲನ್ನು ಸಲ್ಲಿಸುವ ಮೂಲಕ ಕೋರಿಕೊಂಡಿರುತ್ತಾನೆ. ಈ ಕಾರ್ಯ ನೀತಿಯೊಂದಿಗೆ, ಈ ನಡಾವಳಿಯಲ್ಲಿ ಅಪೀಲುದಾರ ಮತ್ತು ಮೊದಲನೇ ಪ್ರತ್ಯರ್ಜಿದಾರನಾಗಿರುವಂಥ ನ್ಯಾಯಾಧಿಕರಣದ ಎದುರು ಕ್ಲೇಮುದಾರ ಮತ್ತು ಮೊದಲ ಪ್ರತ್ಯರ್ಜಿದಾರರಾಗಿದ್ದವರು ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರವನ್ನು ನೀಡುವ ಹೊಣೆಗಾರಿಕೆಯನ್ನು ವಿಮಾ ಕಂಪನಿಯ ಮೇಲೆ ಹೇಗಾದರೂ ಮಾಡಿ ವರ್ಗಾಯಿಸಲು ಪ್ರಯತ್ನಿಸಿರುತ್ತಾರೆ. ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕ ಮತ್ತು ಕ್ಲೇಮುದಾರರ ನಡುವಿನ ಮೌನ ಸಮ್ಮತಿಯು, ಇಲ್ಲಿನ ಅಪೀಲುದಾರನಾಗಿರುವಂಥ ಮೊದಲ ಪ್ರತ್ಯರ್ಜಿದಾರನು ಕ್ಲೇಮು ಅರ್ಜಿಯನ್ನು ಮುಂದುವರೆಸಿದ ರೀತಿಯಲ್ಲಿ ಮತ್ತು ಎರಡೂ ನಡಾವಳಿಗಳಲ್ಲಿ ಈ ನಡಾವಳಿಯಲ್ಲಿನ ಮೊದಲ ಪ್ರತ್ಯರ್ಜಿದಾರನಾಗಿರುವಂಥ ಕ್ಲೇಮುದಾರನ ವಿರೋಧಿಸುತ್ತಿರುವ ಅಪೀಲಿನ ರೀತಿಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿರುವುದನ್ನು ಕಾಣಬಹುದಾಗಿರುತ್ತದೆ. ಕ್ಲೇಮನ್ನು ಗಂಭೀರವಾಗಿ ವಿರೋಧಿಸುತ್ತಿರುವ ಒಬ್ಬನೇ ವ್ಯಕ್ತಿ ಮೋಟಾರು ಸೈಕಲಿನ ವಿಮಾದಾರನಾಗಿರುತ್ತಾನೆಂಬುದು, ಈ ನಡಾವಳಿಗಳನ್ನು ಆಯೋಜಿಸಿದಂಥ ರೀತಿಯಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಅದು ಒಂದು ಹಂತಕ್ಕೆ ಬಂದಾಗ, ನ್ಯಾಯಾಧಿಕರಣದ

ಮುಂದೆ ಕ್ಲೇಮುದಾರನಾಗಿದ್ದ ಮತ್ತು ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕ ಇಬ್ಬರಿಗೂ, ವಿಮಾ ಕಂಪನಿಯು ಈ ಸಂದರ್ಭದಲ್ಲಿ ಪರಿಹಾರ ನೀಡುವ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲವೆಂದು ಮನವರಿಕೆಯಾದಾಗ, ಈ ನಡಾವಳಿಯಲ್ಲಿ ಅಪರಾಧಕ್ಕೆ ಗುರಿಯಾದ ವಾಹನದ ಮಾಲೀಕ ವಿಷಯವನ್ನು ಮತ್ತೊಮ್ಮೆ ಆರಂಭಿಸಲು ಮತ್ತು ತನ್ನ ವಾಹನವನ್ನು ಒಳಗೊಂಡು ಉಂಟಾದ ಅಪಘಾತವು ಆರೋಪಪಟ್ಟಿಯಲ್ಲಿನ ಸಾಕ್ಷಿದಾರರ ಮೂಲಕ ನೋಡಲಾಗಿದೆಯೆಂದು ನಿರೂಪಿಸುವುದಕ್ಕೆ ಆರೋಪ ಪಟ್ಟಿಯಲ್ಲಿರುವ ಸಾಕ್ಷಿದಾರರ ಸಾಕ್ಷ್ಯವನ್ನು ಒದಗಿಸಲು ಹಾಗೂ ಆ ದಿನದಂದು ವಾಹನವನ್ನು ಚಾಲನೆ ಮಾಡುತ್ತಿದ್ದನೆಂದು ಹೇಳಲಾದ ಮತ್ತು ಭಾರತೀಯ ಮೋಟಾರು ವಾಹನಗಳ ಅಧಿನಿಯಮದ 134ಎ ಮತ್ತು ಬಿ ಪ್ರಕರಣಗಳ ಉಲ್ಲೇಖದೊಂದಿಗೆ ಭಾರತ ದಂಡ ಸಂಹಿತೆಯ 227, 338ನೇ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಆತನ ವಿರುದ್ಧ ವ್ಯಾಜ್ಯವನ್ನು ಆರಂಭಿಸಿದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಅಪಘಾತ ಮಾಡಿದ್ದನ್ನು ಒಪ್ಪಿಕೊಂಡಂಥ ವ್ಯಕ್ತಿಯು ತನ್ನ ತಪ್ಪನ್ನು ಒಪ್ಪಿಕೊಂಡು 1000/–ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡಲು ಅನುಮತಿಯನ್ನು ಕೋರಿ, ಈ ದಸ್ತಾವೇಜುಗಳ ನೆರವಿನೊಂದಿಗೆ ಹೊಣೆಗಾರಿಕೆಯನ್ನು ವರ್ಗಾಯಿಸಲು ಮತ್ತೊಂದು ಪ್ರಯತ್ನವನ್ನು ಮಾಡಲಾಗಿರುತ್ತದೆ.

8. ಈ ಸಂದರ್ಭದಲ್ಲಿ, ನ್ಯಾಯಾಲಯವು ಕೆ.ಎ.13 ಎಲ್ 1721 ಸಂಖ್ಯೆಯನ್ನು ಹೊಂದಿರುವ ಅಪರಾಧಕ್ಕೆ ಗುರಿಯಾಗಿರುವ ಮೋಟಾರು ಸೈಕಲಿನ ಮಾಲೀಕನ ನೆರವಿನೊಂದಿಗೆ ಕ್ಲೇಮುದಾರನು ಆರಂಭಿಸಿರುವ ಇಡೀ ಕಾರ್ಯಾಚರಣೆಯು ಪರಸ್ಪರ ಷಾಮೀಲಾಗಿ ಮಾಡಿರುವುದಲ್ಲದೆ ಬೇರಾಗಿರುವುದಿಲ್ಲವೆಂದು ಹಾಗೂ ಅಪಘಾತದಲ್ಲಿ ಒಳಗೊಳ್ಳದಂಥ ಮೋಟಾರು ಸೈಕಲಿನ ವಿಮಾದಾರರ ಮೇಲೆ ಪರಿಹಾರವನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ಹೇಗಾದರು ಮಾಡಿ ವರ್ಗಾಯಿಸಲು ಜೊತೆಯಾಗಿ ಪ್ರಯತ್ನಿಸಿರುತ್ತಾರೆಂದು ಭಾವಿಸುತ್ತದೆ. ವಿಷಯದ ಈ ಹಿನ್ನೆಲೆಯಲ್ಲಿ, ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ವರ್ಗಾಯಿಸಲು ಈ ಅಪೀಲನ್ನು ಒಪ್ಪಿಕೊಳ್ಳುವಂತೆ ಮಾಡುವ ಯಾವ ಸಮರ್ಥನೀಯ ಕಾರಣಗಳೂ ಇರುವುದಿಲ್ಲವೆಂದು ನ್ಯಾಯಾಲಯವು ಭಾವಿಸುತ್ತದೆ. ಆದಾಗ್ಯೂ, ಈ ಅಪೀಲಿನ ಕೊನೆಯಲ್ಲಿ ಈ

ನ್ಯಾಯಾಲಯವು, ಈ ನಡಾವಳಿಯಲ್ಲಿ ಅಪಘಾತದಲ್ಲಿ ಈ ವಾಹನವು ಒಳಗೊಂಡಿರುವುದೇ ಸಂಶಯಾಸ್ಪದವೆಂಬುದನ್ನು ಹಾಗೂ ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನಿಂದ ಸಲ್ಲಿಸಿದಂಥ ಅಪೀಲನ್ನು ವಿರೋಧಿಸಲು ಹಾಗೂ ನ್ಯಾಯಾಧಿಕರಣದ ಎದುರು ಕ್ಲೇಮು ಅರ್ಜಿಯನ್ನು ಮುಂದುವರೆಸಲು ತುಂಬಾ ಗಂಭೀರ ಪ್ರಯತ್ನ ಮಾಡುತ್ತಿದ್ದ ಕ್ಲೇಮುದಾರನು, ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನು ಸಲ್ಲಿಸಿದಂಥ ಅಪೀಲನ್ನು ವಿರೋಧಿಸಲು ಹಾಗೂ ನ್ಯಾಯಾಧಿಕರಣದ ಎದುರು ಕ್ಲೇಮು ಅರ್ಜಿಯನ್ನು ಮುಂದುವರೆಸಲು ತುಂಬಾ ಗಂಭೀರ ಪ್ರಯತ್ನ ಮಾಡುತ್ತಿದ್ದ ಕ್ಲೇಮುದಾರನು, ಅಪರಾಧಕ್ಕೆ ಗುರಿಯಾಗಿರುವ ವಾಹನದ ಮಾಲೀಕನು ಸಲ್ಲಿಸಿದಂಥ ಅಪೀಲನ್ನು ವಿರೋಧಿಸಲು ನ್ಯಾಯಾಲಯಕ್ಕೆ ಬರುವುದಕ್ಕೆ ಬದಲಾಗಿ ದೂರವೇ ಉಳಿದುದು ಕಂಡು ಬರುತ್ತದೆಂಬುದು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ವಿಷಯದ ಈ ಹಿನ್ನಲೆಯಲ್ಲಿ, ಈ ಅಪೀಲನ್ನು ವಿಲೆ ಮಾಡುವಾಗ, ಈ ನ್ಯಾಯಾಲಯವು, ಮಾಲೀಕನಿಂದ ಪರಿಹಾರವನ್ನು ಸ್ವೀಕರಿಸಲು ಕ್ಲೇಮುದಾರನು ಹಕ್ಕುಳ್ಳವನಾಗಿದ್ದಾನೆಂದು ನ್ಯಾಯಾಧಿಕರಣವು ತೀರ್ಪು ನೀಡಿದ್ದಾಗ್ಯೂ, ಈ ನ್ಯಾಯಾಲಯವು, ಸದರಿ ವಾಹನವು ಅಪಘಾತಕ್ಕೆ ಒಳಗಾಗಿದೆಯೆಂಬುದೆ ಸಂಶಯಾಸ್ಪದವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ. ಆದ್ದರಿಂದ, ಮಾಲೀಕನ ಮೇಲೆ ಹೊರಿಸಿರುವ ಹೊಣೆಗಾರಿಕೆಯು ದೋಷಪೂರ್ಣವಾದುದಾಗಿರುತ್ತದೆ. ವಿಷಯದ ಈ ಹಿನ್ನೆಲೆಯಲ್ಲಿ, ಮಾಲೀಕನು ಸಲ್ಲಿಸಿದ ಅಪೀಲಿನ ಮಟ್ಟಿಗೆ ಅದನ್ನು ಅಂಗೀಕರಿಸಲಾಗಿರುತ್ತದೆ. ಆದ್ದರಿಂದ ಎರಡನೇ ಪ್ರತ್ಯರ್ಜಿದಾರ ವಿಮಾ ಕಂಪನಿಯ ಮೇಲೆ ಪರಿಹಾರವನ್ನು ಸಂದಾಯ ಮಾಡುವ ಬದ್ಧತೆಯನ್ನು ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

9. ಆದಾಗ್ಯೂ, ಈ ಅಪೀಲನ್ನು ವಿಲೆ ಮಾಡುವಾಗ, ಅಪೀಲುದಾರನು ಮಾಡಿದ ಶಾಸನಾತ್ಮಕ ಠೇವಣಿಯ ಮೊಬಲಗು 25,000/- ರೂ.ಗಳನ್ನು ಮುಟ್ಟುಗೋಲು ಮಾಡಿಕೊಳ್ಳಲಾಗಿರುತ್ತದೆಂಬುದನ್ನು ಸ್ಪಷ್ಟಪಡಿಸಲಾಗಿರುತ್ತದೆ ಹಾಗೂ ಸದರಿ ಮೊಬಲಗನ್ನು ಈ ನಡಾವಳಿಗಳ ವೆಚ್ಚಕ್ಕೆ ಸಂಬಂಧಿಸಿದಂತೆ ಪರಿಗಣಿಸಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿರುತ್ತದೆ.

---